

ಸಣ್ಣ ಪುಟ್ಟ ಪಾತ್ರಗಳಾಗಿ ಮಾತ್ರ ಕಾಣಿಸುವಾಗ, ಅದನ್ನು ಓದುವ ಅವರಿಗೆ ತಮ್ಮವೇ ಮನೆಯ, ಅಕ್ಕಪಕ್ಕದ ಪಾತ್ರಗಳು ಮುಖ್ಯಪಾತ್ರಗಳಾದಾಗ ಆಗುವ ರೋಮಾಂಚನ ಹೇಗಿರಬಹುದು ಎಂಬುದನ್ನೂ ಊಹಿಸಿಕೊಂಡಿದ್ದೆ. ನಮ್ಮ ಸಮಾಜದ ದೃಷ್ಟಿಕೋನವನ್ನು ಕೃತಿಗಳ ಮುಖ್ಯಪಾತ್ರಗಳ ಮೂಲಕ ಜಗತ್ತಿಗೆ ಪ್ರಚುರಪಡಿಸುವ ಅವಕಾಶ ಎಲ್ಲರಿಗೂ ಸಿಗಬೇಕು, ಅದೊಂದು ತುರ್ತು ಅಗತ್ಯ ಎಂಬುದನ್ನು ರಷೀದನ ಪಾತ್ರ ಅರ್ಥ ಮಾಡಿಸಿದೆ.

ಧರ್ಮದ ಗುತ್ತಿಗೆ ಹಿಡಿದ ಪೆಹರೆದಾರರಿಗೆ ಬಲಿಪಶುವಾಗುವವರು 'ಜೆಹಾದ್' ಕಾದಂಬರಿಯ ನಾಯಕ ರಷೀದನಂತಹ ಕೆಳಮಧ್ಯಮ ವರ್ಗದವರು. ಇಡೀ ಕಾದಂಬರಿ ಏಕಕಾಲದಲ್ಲಿ ಅವನ ಬಾಹ್ಯ ಹಾಗೂ ಆಂತರಿಕ ಪಯಣವೂ ಹೌದು.

ಬೊಳುವಾರು ಅವರ ಕಥನಶೈಲಿಯ ಯಶಸ್ಸಿಗೆ ಈ ಪಾತ್ರವೂ ಉತ್ತಮ ಸಾಕ್ಷಿ. ಟಿ.ಪಿ. ಅಶೋಕ ಅವರು ಹೇಳುವಂತೆ ಹಾಸ್ಯಪ್ರಜ್ಞೆ ಮತ್ತು ಲವಲವಿಕೆಗಳ ಮೂಲಕ ಬೊಳುವಾರು ಪ್ರಸಂಗವೊಂದನ್ನು ವಿನೋದಪೂರ್ಣ ಧಾಟಿಯಲ್ಲಿ ನಿರೂಪಿಸುತ್ತಲೇ ನಮ್ಮನ್ನು ಸಮಸ್ಯೆಗಳ ಆಳಕ್ಕೆ ಕರೆದೊಯ್ಯುವ ಸಾಮರ್ಥ್ಯ ಪಡೆದಿದ್ದಾರೆ.

"ಪ್ರವಾಹದ ವಿರುದ್ಧ ದಿಕ್ಕಿನಲ್ಲೇ ಈಜಬೇಕೆಂಬುದು ರಷೀದನ ಹಠವಲ್ಲ, ಆದರೆ ಪ್ರವಾಹವೇ ಅವನ ವಿರುದ್ಧವಾಗಿ ಹರಿದು ಬಂದಾಗ ಮುಳುಗಡೆಯಾಗದಂತೆ ಪ್ರಯತ್ನಿಸಿದ್ದು ಮಾತ್ರ